**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**
**ಕ್ರಿಮೀನಲ್ ಮೊಕದ್ದಮೆ ನಂ. 590/2024.**

**ಚಾಸಾ-03**

**ಪ್ರಾಸಾ-05**

(ಸಾಕ್ಷಿಗೆ ಮರಾಠಿ ಭಾಷೆ ಮಾತ್ರ ಗೊತ್ತಿರುವುದರಿಂದ ಕನ್ನಡ ಭಾಷೆಯಲ್ಲಿ ಕೇಳುವ ಪ್ರಶ್ನೆಗಳನ್ನು ಸಾಕ್ಷಿಗೆ ಮರಾಠಿ ಭಾಷೆಗೆ ಭಾಷಾಂತರಿಸಿ ಸಾಕ್ಷಿ ಮರಾಠಿ ಭಾಷೆಯಲ್ಲಿ ಹೇಳುವ ಉತ್ತರವನ್ನು ಕನ್ನಡ ಭಾಷೆಗೆ ಭಾಷಾಂತರಿಸಲು ಶ್ರೀಮತಿ. ಆರ್.ಎಮ್.ಕೆ ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಲಾಯಿತು ಮತ್ತು ಅವರಿಗೆ ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು.)

**ದಿನಾಂಕಃ 25-03-2026 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಪ್ರಶಾಂತ ತಂಃ ಸುರೇಶ ಶಿರೋಡ್ಕರ |
| ವಯಸ್ಸು | ಃ 51 ವರ್ಷ |
| ಉದ್ಯೋಗ | ಃ ರೈತಾಪಿ |
| ವಾಸ | ಃ ಜಗಲಪೇಟ, ಜೋಯಿಡಾ |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.**

1. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದು ಸ್ಥಳ ಮಹಜರಾಗಿದ್ದು, ಅದನ್ನು ಈಗಾಗಲೇ **ನಿಪಿ-2** ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-2(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದು ಕಚ್ಚಾ ನಕಾಶೆಯಾಗಿದ್ದು, ಅದನ್ನು ಈಗಾಗಲೇ **ನಿಪಿ-3** ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-3(ಸಿ)** ಎಂದು ಗುರುತಿಸಲಾಯಿತು.
2. ದಿಃ 08-01-2024 ರಂದು ಜಗಲಪೇಟ್ ಸಿಂಗರಗಾಂವ ಕ್ರಾಸ್ ನಲ್ಲಿ ಹಿಂದಿನ ದಿನ ಆದ ಅಪಘಾತದ ಬಗ್ಗೆ ಪಂಚನಾಮೆಯ ಸಮಯದಲ್ಲಿ ನಾನು ಸದರಿ ದಾಖಲೆಗಳಿಗೆ ಸಹಿ

ಮಾಡಿರುತ್ತೇನೆ. ಆ ದಿನ ನಾನು ಮತ್ತು ಚಾಸಾ-2 ರವರು ಅಲ್ಲಿಯೇ ಇದ್ದ ಒಂದು ದಾಬಾದ ಹತ್ತಿರ ನಿಂತಾಗ, ಚಾಸಾ-21 ರವರು ಅಲ್ಲಿಗೆ ಬಂದು, ಅಪಘಾತ ನಡೆದ ವಿಷಯ ತಿಳಿಸಿ, ನಮಗೆ ಪಂಚರಾಗುವಂತೆ ಕೋರಿರುತ್ತಾರೆ. ಅಪಘಾತದ ಸ್ಥಳವನ್ನು ಚಾಸಾ-7 ರವರು ನಮಗೆ ತೋರಿಸಿರುತ್ತಾರೆ.

3. ನಾವು ಸ್ಥಳಕ್ಕೆ ಹೋದಾಗ, ಅಪಘಾತಕ್ಕೆ ಇಡಾದ ಮೋಟಾರ ಸೈಕಲ್ ನಂಃ ಕೆಎ-30/ಜೆ-3028 ಮತ್ತು ಕೆಎ-24/ವಾಯ್-3795 ನೇದವುಗಳು ಅಲ್ಲಿಯೇ ಇದ್ದವು. ಅಲ್ಲಿ ಕೆಎ-30/ಜೆ-3028 ನೇದರ ಮೋಟಾರ ಸೈಕಲ್ ನ ಟಾಯರ್ ಬೆಂಡಾಗಿ, ಡೂಮ ಒಡೆದು, ಗಾಜಿನ ಚೂರುಗಳು ಬಿದ್ದಿದ್ದವು ಮತ್ತು ಕೆಎ-24/ವಾಯ್-3795 ಮೋಟಾರ ಸೈಕಲ್ ನ ಟಾಯರ್ ಬೆಂಡಾಗಿ, ಡೂಮ ಒಡೆದು, ಗಾಜಿನ ಚೂರುಗಳು ಬಿದ್ದಿದ್ದವು.

4. ಸ್ಥಳದಲ್ಲಿ ಪೊಲೀಸರು ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ, ಕಚ್ಚಾ ನಕಾಶೆ ತಯಾರಿಸಿ ನಮ್ಮ ಸಹಿ ಪಡೆದಿರುತ್ತಾರೆ ಹಾಗೂ ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 09-30 ರಿಂದ 11-00 ಗಂಟೆಯ ವರೆಗೆ ಮಾಡಿರುತ್ತಾರೆ. ನಿಪಿ-2 ಮತ್ತು 3 ರ ಅಂಶಗಳು ನನಗೆ ಗೊತ್ತು.

5. **ಪಾಟೀ ಸವಾಲುಃ ಆರೋಪಿ ಪರ ವಕೀಲರು ದಂಡ ಪ್ರಕ್ರಿಯಾ ಸಂಹಿತೆ 309 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಸಮಯಾವಕಾಶವನ್ನು ಕೋರಿದ್ದರಿಂದ, ರೂ.300/- ದಂಡದೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

ಸಹಿ ಇದೆ/-

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.**